**ಓ.ಎಸ್ 121/2011**
**ಪಿ.ಡಬ್ಲೂ-1**

ದಿನಾಂಕಃ**02.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಕೆ.ಸಿ.ಬಿ ವಕೀಲರಿಂದಃ**

ನಿಪಿ-5 ತಹಶೀಲ್ದಾರ ನ್ಯಾಯಾಲಯದಲ್ಲಿ ಹೂಡಿದಂತಹ ಅರ್ಜಿ ವಜಾ ಆಗಿರುತ್ತದೆಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ-5 ರ ಆದೇಶವನ್ನು ಪ್ರಶ್ನೆ ಮಾಡಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಸಹ ವಜಾ ಆಗಿರುತ್ತದೆಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯಿಂದ ಮೇಲ್ಮನವಿ ಏನಾಗಿದೆ ಎಂದು ಮಾಹಿತಿಯನ್ನು ನಾನು ಪಡೆದಿರುವುದಿಲ್ಲ ಸರಿ. ಸದರಿ ಮೇಲ್ಮನವಿ ವಜಾ ಆದ ನಂತರ ನನ್ನ ತಂದೆಯಾದ ಸೋಮಣ್ಣ ಬಿನ್ ಭೋಗಯ್ಯರವರು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ರಿವಿಜನ್ 77/2014-15 ರಂತೆ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯು ಸಹ ವಜಾ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಜೀವಿತಾವಧಿಕಾಲದಲ್ಲಿ ಮತ್ತು ಮರಣ ಹೊಂದಿದ ನಂತರ ದಾವೆಯ ವಿದ್ಯಾಮಾನಗಳನ್ನು ತಿಳಿದು ಕೊಂಡಿರದ್ದೀರಾ ಎಂದರೆ ಸಾಕ್ಷಿ ಅವರ ಮರಣದ ನಂತರ ಆಗಿರುವ ವಿದ್ಯಾಮಾನಗಳನ್ನು ತಿಳಿದು ಕೊಂಡಿದ್ದೇನೆಂದು ನುಡಿಯುತ್ತಾರೆ. ಈ ದಾವೆಯನ್ನು ನಮ್ಮ ತಂದೆ ಸ.ನಂ.83/6 ರಕ್ಕೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾರೆ. ಸದರಿ ಸಂಬಂಧ ನನ್ನ ತಂದೆ 2011 ಈ ದಾವೆಯನ್ನು ಹೂಡಿದ್ದಾರೆಂದರೆ ಸರಿ. 2011 ರ ಪೂರ್ವದಲ್ಲಿ ದಾವಾ ಸ್ವತ್ತಿನ ಆರ್.ಟಿ.ಸಿ ಸ್ವಾಧೀನ ಯಾರ ಹೆಸರಿನಲ್ಲಿ ಇತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಕಾಳಾಚಾರಿರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಕಾಳಾಚಾರಿ ಎಂದರೆ ಈ ದಾವೆಯ 3 ನೇ ಪ್ರತಿವಾದಿಯ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.